International Journal of Kannada Research 2019; 5(1): 239-243

International Journal of Kannada Research
www.kannadajournal.com

ISSN: 2454–5813
IJKR 2019; 5(1): 239-243
© 2019 IJKR
www.kannadajournal.com
Received: 26-11-2018
Accepted: 30-12-2018

**ಡಾ. ಕೆ ಶಿವಾನಂದಯ್ಯ**
ಸಹಪ್ರಾಧ್ಯಾಪಕರು,
ಸ್ನಾತಕೋತ್ತರ ಕನ್ನಡ ವಿಭಾಗ,
ಸರ್ಕಾರಿ ಕಲಾ ಕಾಲೇಜು
(ಸ್ವಾಯತ್ತ), ಚಿತ್ರದುರ್ಗ,
ಕರ್ನಾಟಕ, ಭಾರತ

**Correspondence**
**ಡಾ. ಕೆ ಶಿವಾನಂದಯ್ಯ**
ಸಹಪ್ರಾಧ್ಯಾಪಕರು,
ಸ್ನಾತಕೋತ್ತರ ಕನ್ನಡ ವಿಭಾಗ,
ಸರ್ಕಾರಿ ಕಲಾ ಕಾಲೇಜು
(ಸ್ವಾಯತ್ತ), ಚಿತ್ರದುರ್ಗ,
ಕರ್ನಾಟಕ, ಭಾರತ

# ಚಿತ್ರದುರ್ಗ ಜಿಲ್ಲೆಯ ಪ್ರಾತಿನಿಧಿಕ ಜನಪದ ಕಥನಗೀತೆಗಳ ಸಂಕಲನ ಕತ್ತಾಲ ದಾರಿ ದೂರ

**ಡಾ. ಕೆ ಶಿವಾನಂದಯ್ಯ**

**ಪೀಠಿಕೆ**

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ, ಹಿರಿಯೂರು ತಾಲೂಕಿನ ವಿವಿಧ ಹಳ್ಳಿಗಳಲ್ಲಿ ಸಂಗ್ರಹಿಸಿದ ಸುಪ್ರಸಿದ್ಧ ಜನಪದ ಕಥನ ಗೀತೆಗಳ ಸಂಕಲನವೇ 'ಕತ್ತಾಲ ದಾರಿ ದೂರ'. ಜನಪದ ಕಥನ ಗೀತೆ ಮೌಖಿಕ ಪರಂಪರೆಯ ಹಾಡು. ಇಲ್ಲಿನ ಕಥೆಗಳಿಗೆ ದೀರ್ಘ ಪರಂಪರೆಯಿದೆ. ತ್ರಿಪದಿಗಿಂತ ದೀರ್ಘವೂ ಮಹಾಕಾವ್ಯಗಳಿಗಿಂತ ಕಡಮೆ ಪ್ರಮಾಣದ ಕಥನವನ್ನು ಒಳಗೊಂಡಿದೆ. ಜನಪದ ಕಥನಗೀತೆಗಳು ಸ್ತ್ರೀ ಪ್ರಧಾನವಾದುವು. ಇಲ್ಲಿನ ಎಲ್ಲ ಕಥನಗೀತೆಗಳು ಹೆಣ್ಣಿನ ಅಂತರಾಳದ ನೋವು, ಸಂಕಟ, ಅಪಮಾನಗಳು ಅಭಿವ್ಯಕ್ತಗೊಂಡಿವೆ. ಪುರುಷ ಪ್ರಧಾನ ಸಮಾಜ ರೂಪಿಸಿಕೊಂಡು ಬಂದ ಮೌಲ್ಯ, ನಂಬಿಕೆ, ಸಿದ್ಧಾಂತಗಳಿಗೆ ವ್ಯತಿರಿಕ್ತವಾಗಿ ಬದುಕದೇ ಇರುವಂತಹ, ಪ್ರತಿಭಟಿಸದೇ ಇರುವಂತಹ ಸಂದರ್ಭ ಮತ್ತು ಆ ಕಾಲದ ಸಮಾಜ ರೂಪಿಸಿಕೊಂಡದ್ದು ದುರಂತವಾಗಿ ಕಾಣಿಸುತ್ತದೆ. ದಿಟ್ಟತನ ತೋರಿಯೂ ಸಾಧ್ಯವಾಗದೆ ಬಲಿ ತ್ಯಾಗ ತೋರಿದ್ದಾರೆ.

ಹೆಣ್ಣಿಗೆ ಎಲ್ಲ ಬಗೆಯ ಸ್ವಾತಂತ್ರ್ಯಗಳಿದ್ದಾಗ್ಯೂ ಅದನ್ನು ಅನುಭವಿಸುವ ಪ್ರತಿಭಟಿಸುವ, ಹಕ್ಕಾಗಿಸಿಕೊಳ್ಳುವ ಆರೋಗ್ಯಪೂರ್ಣ ಸಮಾನತೆಯ ಸಮಾಜ ಇನ್ನೂ ನಮ್ಮೆದುರಿಗಿಲ್ಲ. ಹೀಗಿರುವಾಗ ಅಂದಿನ ಊಳಿಗಮಾನ್ಯ ಕಾಲಘಟ್ಟದಲ್ಲಿ ಹೆಣ್ಣಿನ ನಿಜದನಿ ಕುಟುಂಬದಲ್ಲಷ್ಟೇ ಕೇಳಿದೆ. ಹೆಚ್ಚೆಂದರೆ ಪಕ್ಕದ ಗೆಳತಿಯರ ಮನೆ, ತವರು, ಸಾಮಾಜಿಕ ಗಡಿಗಳನ್ನು ಮೀರುವ ಯಾವ ಸಾಹಸವೂ ಅವಳಿದಂದ ನಡೆದಿಲ್ಲ. ಭಿನ್ನ ಸಾಂಪ್ರದಾಯಿಕ ಬದುಕನ್ನು, ಸುತ್ತಮುತ್ತಲಿನ ಸಂಸ್ಕೃತಿಯನ್ನು ಒಳಗೊಂಡಿದೆ. ಭಿನ್ನ ಭಿನ್ನ ಘಟನೆ, ಚರಿತ್ರೆ, ಪೌರಾಣಿಕ, ಐತಿಹಾಸಿಕ ಘಟನೆಗಳು, ನೀತಿ- ಅನುಭಾವಿಕ ನೆಲೆಗಳು, ಧಾರ್ಮಿಕ ಚರಿತ್ರೆ, ವೀರಕತೆ ಮುಂತಾದ ಘಟನಾವಳಿಗಳು ಇಲ್ಲಿನ ಸಂವೇದನೆಯನ್ನು ರೂಪಿಸಿವೆ, ಪುರುಷ ಸಮಾಜದ ಎಲ್ಲ ದೌರ್ಬಲ್ಯಗಳನ್ನು ಶೋಷಣೆಯನ್ನು ಮಾನಸಿಕವಾಗಿ ಒಪ್ಪಿಕೊಳ್ಳಲಾರದೆ

ದೈಹಿಕವಾಗಿ ಸಹಗಮನ, ಕೆರೆಗೆ ಹಾರ, ತ್ಯಾಗ-ಬಲಿದಾನದ ಮೂಲಕ ಹೆಣ್ಣಿನ ಸಮಾಜ ಚಿತ್ರಣವೇ ಇಲ್ಲಿ ಮೂಡಿಬಂದಿದೆ. 'ಕತ್ತಾಲ ದಾರಿ ದೂರ' ಹನ್ನೊಂದು ಕಥನಗೀತೆಗಳ ಸಂಕಲನ. ಮಹಾಸತಿ ವೀರತಿಮ್ಮವ್ವ, ಮಹಾಸತಿ ತಾಡಿ ನಾಗಮ್ಮ, ಮಹಾಸತಿ ಕಾಟವ್ವ, ಮದಗದ ಕೆಂಚವ್ವ, ಧರಣಿಯಮ್ಮನ ಬಲಿದಾನ, ವಲ್ಲಣದೇವಿ, ರೇಣುಕ ಎಲ್ಲಮ್ಮ, ಕಾಡಸಿದ್ದವ್ವ, ಗುಣಸಾಗರಿ, ಸತಿ ಚೆನ್ನಮ್ಮ- ಸ್ತ್ರೀ ಬಲಿದಾನದ ಗೀತೆಗಳು. ಆತ್ಮಬಲಿಯ ಇತರ ಪ್ರಕಾರದ ಎರಡು ಗೀತೆಗಳು ಈ ಸಂಕಲನದಲ್ಲಿವೆ. ಮದಗದ ಕೆಂಚವ್ವ ಬಲಿಯಾದುದನ್ನು ಹೇಳುತ್ತದೆ. ಧರಣಿಯಮ್ಮ ಊರ ಕೋಟೆಗೆ ತನ್ನನ್ನು ಬಲಿಕೊಟ್ಟುಕೊಂಡು ಅಮರಳಾದುದನ್ನು 'ಧರಣಿಯಮ್ಮನ ಬಲಿದಾನ' ಗೀತೆ ಹೇಳುತ್ತದೆ. ಊರಿಗೊಂದು ಕೆರೆ ಕಟ್ಟಿಸಿದಾಗ ಸ್ತ್ರೀಯೊಬ್ಬಳನ್ನು ಬಲಿಕೊಡುವ ರೂಢಿ ಇತ್ತು. ಸಹಗಮನದಂತೆ ವ್ಯಾಪಕವಾಗಿ 'ನೀರಿಗೆ ಬಲಿ'ಯ ಪ್ರಸಂಗಗಳು ನಡೆಯದೇ ಹೋಗಿದ್ದರೂ ಪರಿಣಾಮದಲ್ಲಿ ಒಂದೇ ಎಂದು ತಿಳಿಯಬಹುದು. ಕೆರೆಗೆಹಾರದಂತಹ ಕಥನ ಕಾವ್ಯಗಳಲ್ಲಿ ಸಾಮಾನ್ಯ ಪ್ರಧಾನ ಪಾತ್ರವಾಗಿ ಬರುವವರು ಸೊಸೆಯಂದಿರು. ಗೌಡನ ಹೆಂಡತಿ ಅಥವಾ ಹೆಣ್ಣು ಮಕ್ಕಳು ಕೆರೆಗೆ ಆಹಾರವಾಗುವುದಕ್ಕೆ ತಯಾರಾದಂತೆ ಕಂಡುಬರುವುದಿಲ್ಲ. ಗೌಡನಿಗೆ ಹೆಂಡತಿ ಮೇಲೆ ಪ್ರೀತಿ, ಹೆಣ್ಣುಮಕ್ಕಳನ್ನು ಕಳೆದುಕೊಳ್ಳಲು ಇಷ್ಟವಿಲ್ಲ. ಉಳಿದವಳು ಸೊಸೆ. ಆಕೆ ಸತ್ತರೆ ಚಿಂತೆಯಿಲ್ಲ. ಮತ್ತೊಬ್ಬಳನ್ನು ತಂದು ಮಗನಿಗೆ ಮದುವೆ ಮಾಡಬಹುದು. 'ಸೊಸೆ ಸತ್ತರೆ ಸೋಬಾನೆ ಮಗ ಸತ್ತರೆ ಮನೆಯಾಳು' ಎಂಬ ಮಾತು ಕಥನಗೀತೆಗಳಲ್ಲಿ ಉಲ್ಲೇಖವಾಗಿದೆ. ಊರ ಹಿತಕ್ಕಾಗಿ ತನ್ನ ಪ್ರಾಣ ಕೊಡಲು ಸೊಸೆ ಸಿದ್ಧಳಾಗುತ್ತಿದ್ದಳು. ಮನೆಯಲ್ಲಿ ಆಕೆಗೆ ಕೊನೆಯ ಸ್ಥಾನವಿದ್ದರೂ ಆಕೆಯ ಸಾವಿನ ನಂತರ ಎಲ್ಲರ ಮನಸ್ಸಿನಲ್ಲೂ ಉನ್ನತ ಸ್ಥಾನವನ್ನು ಪಡೆಯುತ್ತಿದ್ದಳು. ಪತಿ ತೀರಿಕೊಂಡ ಒಂದೇ ಕಾರಣಕ್ಕಾಗಿ ವೈಧವ್ಯ ಹೊತ್ತು ಬದುಕಲಾರದ್ದಕ್ಕಾಗಿ ಸತಿಯರು ಅನುಗಮನ ಕೈಗೊಂಡರೆ, ಪತಿ ಪ್ರೇಮ ಪ್ರದರ್ಶಿಸದೆ, ನೀರಿಗೆ ಹೆಣ್ಣು ಮಕ್ಕಳು ಬಲಿಯಾಗುತ್ತಿದ್ದ ಸಂದರ್ಭದಲ್ಲಿ ಸತಿಯಾದವಳು ಊರ ಹಿತಕ್ಕಾಗಿ ಪ್ರಾಣಾರ್ಪಣೆ ಮಾಡುತ್ತಾಳೆ. ಈ ಬಗೆಯ ಕಥನಗೀತೆಗಳಲ್ಲಿ ಗ್ರಾಮದ ಹಿತಕ್ಕಾಗಿ ತ್ಯಾಗ ಮಾಡುವುದು ಗೀತೆಯ ಮೊದಲ ಭಾಗದಲ್ಲೂ, ಎರಡನೆಯ ಭಾಗದಲ್ಲಿ ತೀರಿಕೊಂಡವಳು ದೇವತೆಯಾದ ನಂತರವೂ ಕಥೆ ಮುಂದುವರಿಯುತ್ತದೆ. ಸಾಯುವುದಕ್ಕೆ ಮೊದಲೇ ಆಕೆ ತವರು ಮನೆಗೆ ಹೋಗಿ ಗಂಡನ ಮನೆಯಲ್ಲಿ ಬದುಕು ಮಾಡುವುದು ತನ್ನೊಬ್ಬಳಿದಂದ ಆಗದೆಂದೂ ತಂಗಿಯನ್ನು ಗಂಡನಿಗೆ ಕೊಡುವಂತೆ ಒಪ್ಪಿಸಿ ಭಾಷೆ ತೆಗೆದುಕೊಂಡು ಬರುತ್ತಾಳೆ. ಆಗ ಆಕೆ ಕೆರೆಗೆ ಬಲಿಯಾಗುವ ವಿಷಯ ತಿಳಿಸುವುದಿಲ್ಲ. ಕೊನೆಯ ಭಾಗದಲ್ಲಿ ಸತಿ ತೀರಿಕೊಂಡ ಮೇಲೆ ದೂರ ನೆಲೆಸಿದ್ದ ಗಂಡ ಸುದ್ದಿ ತಿಳಿದು ಧಾವಿಸಿ ಬಂದು ಕರೆಯ ಮುಂದೆ ನಿಂತು ದುಃಖಿಸುತ್ತಾನೆ. ದೇಹ ಧರಿಸಿ ಬಂದ ಸತಿ ಆತನಿಗೆ ತನ್ನ ತಂಗಿಯನ್ನೇ ಮದುವೆಯಾಗುವಂತೆ ತಿಳಿಸುತ್ತಾಳೆ. ನೀರಿಗಾಗಿ ಬಲಿಯಾದ ಹೆಂಗಸರ ತ್ಯಾಗ ಈ ಬಗೆಯ ಕಥನಗೀತೆಗಳಲ್ಲಿ ತುದಿಮುಟ್ಟುವಂತೆ ಚಿತ್ರಿತವಾಗಿದೆ. ಚಿತ್ರದುರ್ಗ, ದಾವಣಗೆರೆ, ಹಿರೇಕೆರೂರು, ಶಿಕಾರಿಪುರ, ಶಿವಮೊಗ್ಗ ಈ ಭಾಗದಲ್ಲಿ ಬಹಳ ಪ್ರಸಿದ್ಧವಾಗಿ ಈ ಕಥನಗೀತೆ ಸ್ತ್ರೀ ಬಲಿದಾನದ ಕಥಾನಕಗಳಲ್ಲೆಲ್ಲ ಅತ್ಯಂತ ಸುದೀರ್ಘವಾಗಿ ಬೆಳೆದು ಬಂದಿದೆ. ಇದನ್ನೇ ಹೋಲುವಂತಿರುವ ಕಥನಗೀತೆಯೆಂದರೆ ಧರಣಿಯಮ್ಮನ ಬಲಿದಾನ. ಕೋಟೆ ನಿರ್ಮಾಣಕ್ಕೆ ಬಲಿಯಾದ ಕತೆ. ಪಾತಿವ್ರತ್ಯ ಪರೀಕ್ಷೆ ಕುರಿತ ಕಥನ ಗೀತೆಗಳಲ್ಲಿ ಗುಣಸಾಗರಿ, ರೇಣುಕ ಎಲ್ಲಮ್ಮ ಇವನ್ನು ಕಾಣಬಹುದು. ಈ ಬಗೆಯ ಕಥನ ಗೀತೆಗಳು ನಾಡಿನ ಪರಂಪರಾಗತ ಮೌಲ್ಯಗಳಾದ ಪಾತಿವ್ರತ್ಯ, ಸತ್ಯವಂತರಿಗೆ ಜಯ ದುಷ್ಟರಿಗೆ ಶಿಕ್ಷೆ ಇದೆಲ್ಲದರ ಸುತ್ತ ಬೆಳೆದುಕೊಂಡಿರುತ್ತದೆ. ಸ್ತ್ರೀಯರ ಹತ್ತು ಹಲವು ಮುಖಗಳ ಪರಿಚಯ ಇಲ್ಲಿದೆ. ಗುಣಸಾಗರಿ, ಸತಿ ಚೆನ್ನಮ್ಮ, ಕಾಡಸಿದ್ದಮ್ಮ ಇವರೆಲ್ಲ ಎಷ್ಟೆಲ್ಲಾ ಬವಣೆಗಳ ಮಧ್ಯೆ ತಮ್ಮ ಪಾತಿವ್ರತ್ಯವನ್ನು ಉಳಿಸಿಕೊಂಡವರು. ಈ ಪಾತ್ರಗಳ ಆದರ್ಶ ಮುಗಿಲು ಮುಟ್ಟುವಂತೆ ಚಿತ್ರಿತವಾಗಿದೆ.

**ಮಹಾಸತಿ ಕಥನಗೀತೆಗಳು**

ಮಹಾಸತಿ ವೀರತಿಮ್ಮವ್ವ ಪ್ರಸ್ತುತ ಸಂಕಲನದಲ್ಲಿರುವ ಮಹಾಸತಿ ಕಥನಗೀತೆ. ಹಿರಿಯೂರು ತಾಲ್ಲೂಕು ಮದನಕುಂಟೆಯ ಶಾಂತಮ್ಮ ಮತ್ತು ಕರಿಯಮ್ಮ ಹಾಡಿದ ಕಥನಗೀತೆ. ಹಾಲು ಮಜ್ಜಿಗೆ ಮಾರುವ ಕಾಯಕದ ಜಂಪವ್ವ

ಎಂಬಾಕೆಯ ಮಗ ವೀರನಾಗಣ್ಣ. ಪಶುಪಾಲಕನಾಗಿದ್ದ ವೀರನಾಗಣ್ಣ ಪರಾಕ್ರಮಿ. ಹುಲಿಯನ್ನು ಹಿಮ್ಮೆಟ್ಟಿಸುವ ಶಕ್ತಿಯುಳ್ಳವನು. ಸಿರಾ ಪ್ರಾಂತ್ಯದವರೆಗೂ ದನ ಕಾಯಲು ಹೋಗುತ್ತಿದ್ದನು. ಅರಮನೆಯ ಪಂಜರದ ಹುಲಿಯನ್ನು ಕೊಂದು ಖ್ಯಾತನಾದವನು. ಈತನ ಪರಾಕ್ರಮವನ್ನು ಸಿರಾದ ಪಾಳೇಗಾರ ರಂಗಣ್ಣನಾಯಕ ಚೆನ್ನದ ಸತ್ತಿಗೆ ಕೊಟ್ಟು ಸತ್ಕರಿಸಿದ್ದನು. ಹರ್ತಿಕೋಟೆ ಯುದ್ಧದಲ್ಲಿ ಜಯ ತಂದ ಕೀರ್ತಿ ಈತನದು. ವೀರನಾಗಣ್ಣನನ್ನು ಮದುವೆಯಾಗಲು ಬಯಸಿ ಅನೇಕ ಹೆಣ್ಣುಮಕ್ಕಳು ಮುಂದೆ ಬರುತ್ತಾರೆ. ಆದರೆ ವೀರನಾಗಣ್ಣ ಹರ್ತಿಕೋಟೆಯ ತಿಮ್ಮವ್ವಳನ್ನು ಮದುವೆಯಾಗಲು ಬಯಸುತ್ತಾನೆ. ಮದುವೆಯಾದ ಕೆಲವೇ ದಿನಗಳಲ್ಲಿ ನಡೆದ ಸಾಣಿಕೆರೆ ಕದನದಲ್ಲಿ ವೀರಮರಣ ಹೊಂದುತ್ತಾನೆ. ವಿಷಯ ತಿಳಿದ ಮಹಾಸತಿ ವೀರತಿಮ್ಮವ್ವ ತನ್ನ ಎರಡು ಮಕ್ಕಳು, ಅಪಾರ ಬಂಧು-ಬಳಗವನ್ನು ತೊರೆದು, ತಾಯಿ-ತಂದೆ ಮಾತನ್ನು ಕೇಳದೆ ಕೊಂಡವೇರಿ ಮಹಾಸತಿಯಾದುದನ್ನು ಮಹಾಸತಿ ವೀರತಿಮ್ಮವ್ವ ಕಥನಗೀತೆ ಪ್ರಸ್ತುತಪಡಿಸುತ್ತದೆ.

ತಾಡಿ ನಾಗಮ್ಮ ಕಥನ ಗೀತೆಯನ್ನು ಚಳ್ಳಕೆರೆ ತಾಲ್ಲೂಕಿನ ಅತ್ತೆ-ಸೊಸೆಯರಾದ ಚೌಡಮ್ಮ ಮತ್ತು ತಿಮ್ಮಕ್ಕ ಅವರು ಹಾಡಿದ್ದಾರೆ. ತಾಡಿವಡ್ಡಗೆರೆಯ ನಾಗಮ್ಮ ಚಿಕ್ಕವಳಿದ್ದಾಗಲೇ ಈರಗ್ಯಾತರಾಯನ ಪುತ್ರ ನಾಗಣ್ಣನಿಗೆ ಬಂಧು-ಬಳಗ ಸೇರಿ ಮದುವೆ ಮಾಡಿಸುತ್ತಾರೆ. ಮಗಳು ಇನ್ನು ಚಿಕ್ಕವಳೆಂದು ತಾಯಿ-ತಂದೆ ಕೇಳಿಕೊಂಡರು, ಬಿಡದೆ ಬಂಧು-ಬಳಗ ಸೇರಿ ಒಪ್ಪಿಸುತ್ತಾರೆ. ಹೆಣ್ಣಿಗೆ ವಡವೆ ವಸ್ತ್ರ ನೀಡುವಾಗಲೇ ಅಪಶಕುನಗಳಾಗುತ್ತವೆ. ಆದರೂ ಅದನ್ನು ಲೆಕ್ಕಿಸದೆ ಸಾಂಪ್ರದಾಯಿಕ ಆಚರಣೆಗಳೊಂದಿಗೆ ವಿವಾಹ ಮಾಡಿಸುತ್ತಾರೆ. ಎಲೆಯೋರ ಕುಲದವಳಾದ ನಾಗಮ್ಮ ಬಸಳೆನೋರ ಕುಲದವಳಾಗಿ ಅತ್ತೆ ಮಾವ ಗಂಡನೊಡನೆ ವಡ್ಡಗೆರೆ ಸೊಸೆಯಾಗಿ ಜೀವನ ಆರಂಭಿಸುತ್ತಾಳೆ. ನಾಗಣ್ಣ ದಂಡು ಸೇರಿ ದಳವಾಯಿ ಆಗುತ್ತಾನೆ. ನಾಗಣ್ಣ ದಂಡಿನಲ್ಲಿ ಮಡಿಯುತ್ತಾನೆ. ಆಗ 'ರಾಜ್ಯೇವ ಕೊಟ್ಟೇವು ಇರುಮಗಳೆ, ತುಪ್ಪಾಜೋನವುಣ್ಣು ಮಗಳೇ' ಎಂದೆಲ್ಲಾ ಸಮಾಧಾನ ಹೇಳಿದರು. ಆದರೆ ನಾಗಮ್ಮ 'ಕೊಂಡಾ ಕೊಡದಿದ್ದಾರೆ ಸುಟ್ಟುಕಂಬೆ ನಾಲಿಗೆಯ' ಎನ್ನುತ್ತಾಳೆ. ಹೀಗೆ ಕೊಂಡ ಪ್ರವೇಶಿಸಿ, ಉರಿದು ಬೂದಿಯಾಗಿ ಊರಿನ ಜನರ ಕಣ್ಣಿನಲ್ಲಿ ದೇವತೆಯಾದ ಕತೆಯನ್ನು ಮಹಾಸತಿ ತಾಡಿ ನಾಗಮ್ಮ ಕಥನ ಕವನ ನಿರೂಪಿಸುತ್ತದೆ.

ಮಹಾಸತಿ ಕಾಟವ್ವ ಕಥನ ಗೀತೆಯನ್ನು ಚಿಕ್ಕೇನಹಳ್ಳಿ ಗೊಲ್ಲರಹಟ್ಟಿ ಸಿರಿಯಜ್ಜಿ ಹಾಡಿದ್ದು. ಒಂದು ನೂರ ಏಳು ಸಾಲುಗಳನ್ನು ಒಳಗೊಂಡಿದೆ. ಆರಂಭದಲ್ಲಿ ಜನಪ್ರಿಯವಾದ ಸರಸ್ವತಿ ಪ್ರಾರ್ಥನೆ ಇದೆ.

ಎಲ್ಲಾರ ವಚನಾಕು ನಿಲ್ಲೋಳೆ ಸರಸೋತಿ
ನೆಲ್ಲು ತೆನೆಯಾಂಗ ಬಳುಕೂತ
ನೆಲ್ಲು ತೆನೆಯಾಂಗ ಬಳುಕೂತ/ಬಾಗೂತ
ನಿಲ್ಲಮ್ಮ ನಮ್ಮ ವಚನಾಕ

ಕಾಟವ್ವನನ್ನು ಸ್ಮರಿಸುವ, ಆಕೆ ಶೃಂಗಾರಗೊಳ್ಳುವ ಮತ್ತು ಕೊಂಡಕ್ಕೆ ಹೋಗುವ ವಿವರಗಳೇ ಇಲ್ಲಿ ಹೆಚ್ಚಾಗಿವೆ. ಕಾಟವ್ವನ ಗಂಡನ ಮನೆ ಹುಲಿಕುಂಟೆ. ಕೊಂಡ ಹೋಗುವ ಮುನ್ನ ನಿಡುಗಲ್ಲಿನ ಪಾಳೆಯಗಾರರ ಅಪ್ಪಣೆ ಪಡೆಯುತ್ತಾರೆ. ಆದರೆ ಈಕೆ ಮದುವೆ ಪ್ರಸ್ತಾಪವಾಗಲಿ, ಪತಿ ಮುತ್ತಣ್ಣ ಮಡಿದ ಕಾರಣವಾಗಲಿ ತಿಳಿದು ಬರುವುದಿಲ್ಲ. ತಂದೆ, ಮೈದುನ, ಅತ್ತೆ-ನಾದಿನಿಯರ ಪ್ರಸ್ತಾಪ ಬರುತ್ತದೆ. ಯಥಾರೀತಿ ಬಂಧು-ಬಳಗ ಕೊಂಡ ಹೋಗುವುದನ್ನು ತಡೆಯುತ್ತಾರೆ. ಕೊಂಡಕ್ಕೆ ಹೋಗುವ ಚಿತ್ರಣ ನಿರೂಪಿಸಲ್ಪಟ್ಟಿದೆ.

**ಶೀಲ ಶಂಕೆಗೊಳಗಾದ ಅಸಹಾಯಕ ಹೆಣ್ಣನ್ನು ಕುರಿತ ಕಥನಗೀತೆಗಳು**

ಕಾಡಸಿದ್ದಮ್ಮ ಕಾಡುಪಾಲಾದವಳ ಕಥೆ. ಚಳ್ಳಕೆರೆ ತಾಲ್ಲೂಕಿನ ಗೊರಲಕಟ್ಟೆ ಗ್ರಾಮದ ಹನುಮಜ್ಜಿ ಹಾಡಿದ ಕಥನಗೀತೆ. ಚಿತ್ರದುರ್ಗ ಪಟ್ಟಣವನ್ನಾಳುವ ದೊರೆಗೆ ಐವರ ಹೆಂಡಿರು. ಆದರೂ ಮಕ್ಕಳಿಲ್ಲ. ಆಗ ಮೇಲೊಬ್ಬಳು ಕನ್ಯೆಗಾಗಿ ಹುಡುಕ ಹೊರಟು ಕಾಡಸಿದ್ದಯ್ಯನ ಪುತ್ರಿ ಸಿದ್ದಮ್ಮನ್ನು ಲಗ್ನವಾಗುತ್ತಾನೆ. ಸಿದ್ದಮ್ಮ ಗರ್ಭಿಣಿಯಾಗುತ್ತಾಳೆ. ಹೆರಿಗೆ ಸಮಯದಲ್ಲಿ ಸವತಿಯವರು

ಮತ್ಸರದಿಂದ ಆಕೆ ಜನಿಸಿದ ಎರಡು ಮಕ್ಕಳನ್ನು ತಿಪ್ಪೆಗೆ ಎಸೆದು, ತಾಯಿಯ ಬಳಿ ಕಸಬರಿಗೆ ಮತ್ತು ಗುಂಡುಕಲ್ಲು ಇರಿಸುತ್ತಾರೆ. ತಿಪ್ಪೆಯಲ್ಲಿ ಬಿದ್ದ ಮಕ್ಕಳನ್ನು ಹೂಗಾರ ಮಲ್ಲಣ್ಣ ಸಾಕುತ್ತಾನೆ. ಬಂಜೆ ರಾಣಿಯರು ಒಮ್ಮೆ ಗಂಗೆ ಪೂಜೆಗೆಂದು ಬಂದಾಗ ಮಲ್ಲಣ್ಣನ ಮಕ್ಕಳು ಮುಖಾಮುಖಿಯಾಗುತ್ತಾರೆ. 'ಅನ್ನೆರಡು ಪಾಪ ಮಡಿಲಾಗಿಟ್ಟುಕೊಂಡು ತಣ್ಣೀರು ಮುಳುಗೋರು ನೀವು ಬೆಡಗೀರು' ಎಂದು ಆಡಿಕೊಂಡವು. ಸವತಿಯರು ಮಕ್ಕಳ ಮಾತು ಕೇಳಿ ಆಶ್ಚರ್ಯಪಟ್ಟರು. ಅಲ್ಲಿಗೆ ಬಂದ ರಾಜನ ಮುಂದೆ ಮಕ್ಕಳು ಕಥೆಯೊಂದನ್ನು ಹೇಳುತ್ತಾರೆ. ಅದು ರಾಜನ ಕಥೆಯೇ ಆಗಿರುತ್ತದೆ. ಆಗ ಸವತಿ, ಸೂಲಗಿತ್ತಿಯರಿಗೆ ಶಿಕ್ಷಿಸಿ, ಕಾಡು ಪಾಲಾಗಿದ್ದ ಸಿದ್ದಮ್ಮನನ್ನು ಕರೆತರುವ ಸುಖಾಂತ್ಯದೊಂದಿಗೆ ಕಥೆ ಮುಕ್ತಾಯವಾಗುತ್ತದೆ.

ವಲ್ಲಣದೇವಿ: ತೊಂಬತ್ತೈದು ಸಾಲುಗಳಿರುವ ಸಂಕಲನದ ಅತ್ಯಂತ ಚಿಕ್ಕ ಕಥನ ಗೀತೆ. ಇದನ್ನು ಹಾಡಿದವರು ದಾನಮ್ಮ. ಗಂಡನ ಮನೆ ಮತ್ತು ತವರು ಮನೆಗಳೆರಡೂ ಕಡೆ ಸಲ್ಲದೆ ಅಸಹಾಯಕಳಾಗಿ ಬೆಂಕಿ ಪಾಲಾದವಳ ಕಥೆ. ನೀರು ತರಲು ಹೋದ ವಲ್ಲಣದೇವಿಯ ಊರಿನ ಶ್ರೀಮಂತ ಪುರುಷ ಬಯಸುತ್ತಾನೆ. ಅವಳ ಸೌಂದರ್ಯಕ್ಕೆ ಮಾರುಹೋಗುತ್ತಾನೆ. 'ನಿಮ್ಮೋರು ಕಾಣದಂತೆ ನಮ್ಮೋರು ಕಾಣದಂಗೆ ನಾರಿ ನೀ ಮಲಗೋ ನೆಲೆಯೇಳ" ಎಂದು ಕೇಳುತ್ತಾನೆ. ಅದಕ್ಕೆ ವಲ್ಲಣದೇವಿ ಊರಿನ ಮಧ್ಯೆ ಮನೆಯಿದೆ. ಅಲ್ಲಿ ಕಾಯುವ ಪುರುಷರಿದ್ದಾರೆ, ಮನೆಯಲ್ಲಿ ಅಪಾರ ಬಂಧು-ಬಳಗವಿರುವುದರಿಂದ ಮನೆಗೆ ಬರಲು ಸಾಧ್ಯವಿಲ್ಲ ಎಂದು ತಿಳಿಸುತ್ತಾಳೆ. ಸುದ್ದಿ ತಿಳಿದ ಗಂಡ ಅನ್ಯನೆಪವೊಡ್ಡಿ ತವರು ಮನೆಗೆ ಕಳುಹಿಸುತ್ತಾನೆ. ತವರು ಮನೆಯಲ್ಲಿ ಕೂಡ ಈಕೆಗೆ ಆಸರೆ ದೊರಕುವುದಿಲ್ಲ. ಎರಡು ಮನೆಯಲ್ಲಿ ಆಶ್ರಯ ಸಿಗದೆ ಅಸಹಾಯಕಳಾದ ವಲ್ಲಣದೇವಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಸಣ್ಣ ತಪ್ಪಿಗಾಗಿ ಅಸಹಾಯಕತೆಯನ್ನು ಅನುಭವಿಸಿ ಸತ್ತ ಹೆಣ್ಣಿನ ದುರಂತ ಕಥನ ಇಲ್ಲಿನ ವಸ್ತು.

**ಊರ ಹಿತಕ್ಕಾಗಿ ಕೆರೆ, ಕೋಟೆಗೆ ಬಲಿದಾನವಾದ ಕಥನಗೀತೆಗಳು**

ಊರಿನ ಹಿತಕ್ಕಾಗಿ ಕೆರೆ, ಕೋಟೆ ನಿರ್ಮಾಣದ ಸಂದರ್ಭದಲ್ಲಿ ಬಲಿದಾನವಾದ ಕಥನ ಗೀತೆಗಳಲ್ಲಿ ಮದಗದ ಕೆಂಚವ್ವ ಮತ್ತು ಧರಣಿಯಮ್ಮನ ಬಲಿದಾನ ಎರಡು ಪ್ರಮುಖವಾದವು. ಈ ಎರಡೂ ಕಥನ ಗೀತೆಗಳನ್ನು ಚಿತ್ರದುರ್ಗದ ಕೆಳಗೋಟೆಯ ದಾನಮ್ಮ ಹಾಡಿದ್ದಾರೆ. ಮದಗದ ಕೆಂಚವ್ವ ಮಾವ ಕಟ್ಟಿಸಿದ ಕೆರೆಗೆ ಬಲಿಯಾದ ಸೊಸೆಯ ಕತೆ. ಇಡೀ ಸಂಕಲನದಲ್ಲೇ ಸುದೀರ್ಘವಾದ ಕಥನ ಗೀತೆ. ಧರಣಿಯಮ್ಮನ ಬಲಿದಾನ ಕೋಟೆಗೆ ಬಲಿಯಾದ ಧರಣಿಯಮ್ಮನ ಕತೆಯನ್ನು ಒಳಗೊಂಡಿದೆ. ಧರಣಿಯಮ್ಮ ಯಾವ ಊರಿನ ಕೋಟೆಗೆ ಬಲಿಯಾದಳು ಎಂಬ ಐತಿಹಾಸಿಕ ವಿವರಗಳು ಕಥನ ಗೀತೆಯಲ್ಲಿ ಕಂಡುಬರುವುದಿಲ್ಲ. ಚಿತ್ರದುರ್ಗದಾದ್ಯಂತ ಕೋಟೆಕೊತ್ತಲಗಳಿಂದ ಕೂಡಿದ ಅನೇಕ ಊರುಗಳಿವೆ. ಊರಿನ ಕೋಟೆಯ ಸಂರಕ್ಷಣೆಗಾಗಿ ಬಲಿದಾನಗಳು ನಡೆದಿರುಬಹುದು. ಅಂತಹದ್ದೊಂದು ಪ್ರಸಂಗವನ್ನು ಸಾಮಾನ್ಯೀಕರಿಸಲಾಗಿದೆ. ಆದರೆ ಸಂಕಲನದಲ್ಲಿರುವ ಇತರ ಕಥನ ಗೀತೆಗಳಿಗೆ ಪುರಾವೆ ಕೆರೆ, ಕಟ್ಟೆ, ಮಹಾಸತಿ ನೆಲೆ ಮುಂತಾದ ಸಾಕ್ಷ್ಯಗಳು ದೊರೆತಿರುವುದನ್ನು ಕಾಣಬಹುದು.

**ಪಾತಿವ್ರತ್ಯ ಪರೀಕ್ಷೆಯ ಕಥನಗೀತೆಗಳು**

ಹೆಣ್ಣಿನ ಪಾತಿವ್ರತ್ಯ ಪರೀಕ್ಷೆಯ ಜನಪದ ಕಥೆ ಮತ್ತು ಜನಪದ ಕಥನಗೀತೆಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರೆತಿವೆ. ಪ್ರಸ್ತುತ ಸಂಕಲನದಲ್ಲಿನ ಗುಣಸಾಗರಿ ಮತ್ತು ರೇಣುಕ ಎಲ್ಲಮ್ಮ ಈ ನಿಟ್ಟಿನಲ್ಲಿ ಗಮನಿಸಬಹುದಾದ ಕಥನಗೀತೆಗಳು. ಎರಡು ಸಾವಿರ ಪಂಕ್ತಿಗಳನ್ನು ಒಳಗೊಂಡಿರುವ ಗುಣಸಾಗರಿ ಶಿಷ್ಟ ಮತ್ತು ಜಾನಪದ ಕಥನ ಮಾದರಿಯ ಆಶಯಗಳನ್ನು ಹೊಂದಿಕೊಂಡು ಬೆಳೆದು ಬಂದಿರುವುದನ್ನು ಕಾಣಬಹುದು.

**ಸತ್ತ ಗಂಡನನ್ನು ಬದುಕಿಸಿದ ಪತಿವ್ರತೆ:** ಶಿಷ್ಟ ಸಾಹಿತ್ಯದಲ್ಲಿ ಸತಿ ಸಾವಿತ್ರಿಯ ಕತೆಯನ್ನು ಹೋಲುವಂತಿದೆ ಸತಿ

ಚೆನ್ನಮ್ಮ ಕಥನಗೀತೆ. ಈ ಕಥನಗೀತೆಯನ್ನು ಹಾಡಿದವರು ಗೊರಲುಕಟ್ಟೆ ಗ್ರಾಮದ ಹನುಮಜ್ಜಿ. ಬಡತನದ ಕಾರಣದಿಂದ ಸತ್ತ ಪುರುಷನನ್ನು ಮದುವೆಯಾಗಿ, ತನ್ನ ದೈವಭಕ್ತಿಯಿಂದ ಸತ್ತ ಗಂಡನನ್ನು ಬದುಕಿಸಿದ ಪತಿವ್ರತೆ. ಕರ್ನಾಟಕದ ಹಲವು ಭಾಗಗಳಲ್ಲಿ ಪ್ರಸಿದ್ಧವಾಗಿರುವ ಕಥೆಯು ಚಿತ್ರದುರ್ಗ ಜಿಲ್ಲೆಯ ಹಲವು ಊರುಗಳಲ್ಲಿ ಭಿನ್ನ ಪಾಠಗಳಲ್ಲಿ ದೊರೆಯುತ್ತದೆ. ಇಂತಹ ಪತಿವ್ರತೆಯರ ಕಥಾ ವಾಚನದಿಂದ ಮಳೆ ಬರುತ್ತದೆ ಎಂಬ ನಂಬಿಕೆ ಜನರಲ್ಲಿದೆ.

**ಆಕರ ಗ್ರಂಥ**


1. ಕತ್ತಾಲ ದಾರಿ ದೂರ
2. ಕೃಷ್ಣಮೂರ್ತಿ ಹನೂರು
3. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1981